ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಈಗ ಈ ಕಂಟ್ರಾಕ್ಟರ್ ಸ್ವಲ್ಪ ಕೆಲಸ ಮಾಡಿರುವುದರಿಂದ ಆಗಿರುವ ಲುಕ್ಸಾನನ್ನು ತುಂಬಿಕೊಳ್ಳಲು ಇವರಿಗೇ ಮತ್ತೆ ಕೆಲಸ ವಹಿಸುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಏಕೆಂದರೆ, ಈ ಬಗ್ಗೆ ಪಾಯದ ಕೆಲಸ ಪ್ರಾರಂಭವಾದ ಕೂಡಲೇ ಈ ಜಾಗಕ್ಕೆ ಸಂಬಂಧಪಟ್ಟ 4 ಜನರು ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದರು. ಈ ತಡೆಯಾಜ್ಞೆ ತೆರವಾದ ನಂತರ ಅವರು ಮತ್ತೆ ಚಿಕ್ಕೋಡಿಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆ ತಂದರು. ಇದೂ ಕೂಡ ತೆರವಾದ ನಂತರ ಅವರು ಕೆಲಸ ಮಾಡಲು ಮುಂದೆ ಬರುತ್ತಿಲ್ಲ. ಆದ್ದರಿಂದ ಮುಂದಿನ ಕೆಲಸವನ್ನು ಖಂಡಿತವಾಗಿಯೂ ಇಲಾಖೆಯವರೇ ನಿರ್ವಹಿಸುತ್ತಾರೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಈ ತಡೆಯಾಜ್ಞೆ ತೆರವಾಗಿ ಒಂದು ವರ್ಷದ ಮೇಲಾಯಿತು. ಆದರೂ ಇಲ್ಲಿಯವರೆಗೆ ಕೆಲಸ ಪ್ರಾರಂಭ ಮಾಡದಿರಲು ಕಾರಣವೇನು ?

ಶ್ರೀ ಎಂ. ಪಿ. ಪ್ರಕಾಶ್.—ನಾವು ಮೇಲ್ಮನವಿಯನ್ನು ಜಾಗ್ರತೆ ತೆರವು ಮಾಡಬೇಕೆಂದು ಅರ್ಜಿ ಹಾಕಿಕೊಂಡ ನಂತರ ಚಿಕ್ಕೋಡಿಯ ಸಿವಿಲ್ ನ್ಯಾಯಾಧೀಶರು ಅಲ್ಲಿಂದ ವರ್ಗವಾಗಿ ಬೇರೆ ಕಡೆ ಹೋದರು. ನಂತರ ಅವರ ಜಾಗಕ್ಕೆ ಬೇರೆಯವರು ಬಹಳ ದಿವಸಗಳ ಕಾಲ ಬರದಿದ್ದ ಕಾರಣದಿಂದ ಈ ಕೇಸನ್ನು ಬೆಳಗಾಂ ನ್ಯಾಯಾಲಯಕ್ಕೆ ವರ್ಗ ಮಾಡಬೇಕೆಂದು ಕೇಳಿಕೊಂಡೆವು. ಆದರಂತೆ ಕೇಸನ್ನು ವರ್ಗ ಮಾಡಿದರು. ಇಲ್ಲಿನಮ್ಮ ಒಂದು ಮನವಿಯಂತೆ ತೀರ್ಮಾನ ಕೊಟ್ಟಿದ್ದಾರೆ. ಅನಂತರವೂ ಕೂಡ ಈ ಕಂಟ್ರಾಕ್ಟ್‌ದಾರರು ನಿಗದಿಪಡಿಸಿದ ಅವಧಿಯಲ್ಲಿ ಕೆಲಸವನ್ನು ಮುಗಿಸಲಿಲ್ಲ.

ವಿಷಯ :—ರಾಜ್ಯದಲ್ಲಿರುವ ಭಿಕ್ಷುಕರ ಗೃಹಗಳ ಬಗ್ಗೆ ಅಂಕಿ ಸಂಖ್ಯೆಗಳು

ಪ್ರಶ್ನೆ 3(9) ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರಿಸುವರೆ*

(ಅ) 1982-83ನೇ ಸಾಲಿನಲ್ಲಿ ತೆರೆಯಲಾದ ಭಿಕ್ಷುಕ ಗೃಹಗಳ ಸಂಖ್ಯೆ ಎಷ್ಟು ;

(ಆ) ರಾಜ್ಯದಲ್ಲಿ ನಿರ್ವಹಿಸಲಾಗುತ್ತಿರುವ ಭಿಕ್ಷುಕ ಗೃಹಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಅಂಕಿ ಸಂಖ್ಯೆಗಳನ್ನು ಒದಗಿಸಬೇಕಾಗಿ ವಿನಂತಿ).

(ಇ) ಈ ಭಿಕ್ಷುಕ ಗೃಹಗಳಲ್ಲಿರುವ ಭಿಕ್ಷುಕರ ಸಂಖ್ಯೆ ಎಷ್ಟು ;

(ಈ) 1979 ರಿಂದ 1983-84 ರವರೆಗೆ ರಾಜ್ಯದಲ್ಲಿನ ಭಿಕ್ಷುಕ ಗೃಹಗಳಿಗಾಗಿ ಆಯವ್ಯಯದಲ್ಲಿ ಕಲ್ಪಿಸಲಾದ ಮೊಬಲಗೆಷ್ಟು ಹಾಗೂ 1979 ರಿಂದ 1983-84ನೇ ಸಾಲುಗಳಿಗೆ ಸಂಬಂಧಿಸಿದಂತೆ ಈವರೆಗೆ ವೆಚ್ಚ ಮಾಡಲಾದ ಮೊಬಲಗೆಷ್ಟು? (ವರ್ಷವಾರು ವಿವರಗಳನ್ನೊದಗಿಸಬೇಕಾಗಿ ವಿನಂತಿ).

ಶ್ರೀಮತಿ ಚಂದ್ರಪ್ರಭ ಅರಸ್.—ಸಮಾಜ ಕಲ್ಯಾಣ ಹಾಗೂ ರೇಷ್ಮೆ ಮಂತ್ರಿಗಳು.—

(ಅ) ಇಲ್ಲ.

(ಆ) 4, (1) ಬೆಂಗಳೂರು (2) ಮೈಸೂರು (3) ದಾವಣಗೆರೆ (4) ಹಾಸನ

(ಇ) 1. ಬೆಂಗಳೂರು—395 3. ದಾವಣಗೆರೆ—37

2. ಮೈಸೂರು —107 4. ಹಾಸನ —19

*ಮಾನ್ಯ ಸದಸ್ಯರು ಹಾಜರಿರಲಿಲ್ಲ.

(ಈ)

ಕ್ರಮ ಸಂಖ್ಯೆ	ಕೇಂದ್ರ			1979–80	1980–81	1981–82	1982–83	1983–84 (6-83ರವರೆಗೆ)
(1)	(2)			(3)	(4)	(5)	(6)	(7)
1.	ಬೆಂಗಳೂರು	ಮೊಬಲಗು	ಹಂಚಿಕೆ:	31,30,100	58,37,492	51,41,700	21,40,900	32,17,400
			ಖರ್ಚು:	9,28,561	7,50,485	9,43,600	11,92,379	4,26,950
2.	ಮೈಸೂರು	"	ಹಂಚಿಕೆ:	4,93,000	6,62,744	7,86,300	7,91,757	6,11,100
			ಖರ್ಚು:	1,04,237	1,23,311	1,44,331	1,40,629	80,597
3.	ದಾವಣಗೆರೆ	"	ಹಂಚಿಕೆ:	2,00,000	4,20,000	7,38,000	5,30,400	5,26,000
			ಖರ್ಚು:	53,992	56,793	39,257	59,090	30,872
4.	ಹಾಸನ	"	ಹಂಚಿಕೆ:	—	25,000	1,50,000	5,00,000	2,93,250
			ಖರ್ಚು:	—	4,453	6,021	49,310	—
5.	ಗುಲ್ಬರ್ಗಾ	"	ಹಂಚಿಕೆ:	1,50,000	2,00,000	2,00,000	5,00,000	3,30,000
			ಖರ್ಚು:	—	—	—	5,000	—
6.	ಬೆಳಗಾಂ	"	ಹಂಚಿಕೆ:	2,00,000	2,00,000	2,50,000	5,00 000	3,44,500
			ಖರ್ಚು:	—	—	—	—	—
7.	ಹುಬ್ಬಳ್ಳಿ, ಧಾರವಾಡ	"	ಹಂಚಿಕೆ:	2,00,000	2,00,000	2,50,000	5,00,000	5,00,000
			ಖರ್ಚು:	—	—	—	56,336	—
8.	ಶಿವಮೊಗ್ಗ	"	ಹಂಚಿಕೆ:	1,50,000	2,00,000	2,50,000	5,00,000	5,41,000
			ಖರ್ಚು:	—	—	—	2,13,631	—
9.	ವಿಜಾಪುರ	"	ಹಂಚಿಕೆ:	2,00,000	2,00,000	2,00 000	5,00,000	3,30,000
			ಖರ್ಚು:	—	—	—	20,000	—
10.	ಬಳ್ಳಾರಿ	"	ಹಂಚಿಕೆ:	1,50,000	2,00,000	2.00,000	3,00,000	3,00,000
			ಖರ್ಚು:	—	—	—	—	—
11.	ಮಂಗಳೂರು	"	ಹಂಚಿಕೆ:	2,00,000	2,00,000	2,50,000	5,00,000	3,00,000
			ಖರ್ಚು:	—	—	—	—	—

ಟಿಪ್ಪಣಿ.—1979–80, 1982–83ನೇ ಸಾಲಿನಲ್ಲಿ ಗುಲ್ಬರ್ಗಾ, ಬೆಳಗಾಂ ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗ, ವಿಜಾಪುರ, ಬಳ್ಳಾರಿ ಮಂಗಳೂರು ಮತ್ತು ಹಾಸನ ಕೇಂದ್ರಗಳಲ್ಲಿ ಕಟ್ಟಡಗಳು ದೊರಕಬಹುದೆಂದು ಒಟ್ಟು ಮೊತ್ತ ನಿಗದಿ ಮಾಡಲಾಗಿತ್ತು. ಕಟ್ಟಡಗಳು ದೊರಕದೇ ಇರುವುದರಿಂದ ಹಣವನ್ನು ಖರ್ಚು ಮಾಡಲಾಗಿಲ್ಲ